# ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.

**ಉಪಸ್ಥಿತರುಃ- ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ**
**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

## ಸಿ.ಸಿ. ನಂಃ 604/2025

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಸೈದಾಪೂರ ಪೊಲೀಸ್ ಠಾಣೆ**

**// ವಿರುದ್ದ //**

**ಆರೋಪಿತರು ಃ ಶಾಂತಪ್ಪ**

## ದೋಷಾರೋಪಣೆ

**ಆರೋಪಿತರುಃ**

1. ಶಾಂತಪ್ಪ ತಂದೆ ಬಸಣ್ಣ ಶೇಖಸಿಂಧಿ,
   ಸಾಃ ರಾಂಪೂರ ಕೆ ಗ್ರಾಮ,
   ತಾಃ ಮತ್ತು ಜಿಃ ಯಾದಗಿರಿ.

**ಆರೋಪಿತರಾದ ನಿಮ್ಮ ವಿರುದ್ಧ ದೋಷಿಸುವ ದೋಷಾರೋಪಣೆ ಏನೆಂದರೆ,**

ದಿನಾಂಕ 28.12.2024 ರಂದು ಬೆಃ 09-00 ಗಂಟೆ ಸುಮಾರಿಗೆ ಸೈದಾಪೂರ ಪೋಲಿಸ್ ಠಾಣೆ ಸರಹದ್ದಿಲ್ಲಿ ಬರುವ ರಾಂಪೂರ ಗ್ರಾಮದ ಚಾಸಾಃ1 ರವರ ಜಮೀನು ಸರ್ವೆ ನಂ. 11ರ ಚಾಸಾಃ1 ರವರು ಆರೋಪಿತನಿಗೆ ಇದ್ದಲಿಗೆ ಬಂದು ನಮ್ಮ ಎಲ್ಲಾ ಜಮೀನುಗಳನ್ನು ಕೋರ್ಟಗೆ ಹಾಕಿ ಬೀಳು ಹಾಕಿದ್ದಿ ಇಲ್ಲಿ ನಿನ್ಯಾಕೆ ಜಮೀನಿಗೆ ನೀರು ಬಿಟ್ಟು ಬೆಳೆಬೆಳೆಯುತ್ತೀದ್ದಿ ಅಂತಾ ಕೇಳಲು ಹೋದಾಗ ಆರೋಪಿಯಾದ ನೀನು ಒಮ್ಮೆಲೆ ಸಿಟ್ಟಿಗೆ ಬಂದು ಸೂಳೇ ಮಗನೇ ರಂಡೀ ಮಗನೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.351(2) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**2.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಚಾಸಾಃ1 ರವರಿಗೆ ಕೈಯಿಂದ ಹೊಟ್ಟೆಗೆ ಬೆನ್ನಿಗೆ ಹೊಡೆದು ನೆಲಕ್ಕೆ ಹಾಕಿ ಒದಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.115(2) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**3.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಚಾಸಾಃ1 ರವರಿಗೆ ಕಲ್ಲಿನಿಂದ ಮೊಳಕಾಲಿಗೆ ಹೊಡೆದು ಒಳಪೆಟ್ಟು ಮಾಡಿದ್ದು, ಈ ಮೂಲಕ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ.118(1) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**4.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಚಾಸಾಃ 1 ರವರು ಅಲ್ಲಿಂದ ಹೋಗುವಾಗ ಇವತ್ತು ಜೀವಂತ ಉಳಿದ್ದಿದ್ದಿ ಮತ್ತೆ ಜಮೀನು ವಿಷಯದಲ್ಲಿ ಏನಾದರೂ ಕೇಳಲು ಬಂದರೆ ನಿನ್ನ ಜೀವಸಹಿತ ಉಳಿಸುವುದಿಲ್ಲ ಅಂತಾ ಜೀವ ಬೆದರಿಕೆ ಹಾಕಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.351 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ತಿಳಿಯುವ ಭಾಷಯಲ್ಲಿ ಓದಿ ಹೇಳಲಾಯಿತು)

**ದಿನಾಂಕಃ 16-10-2025**
**ಸ್ಥಳಃ ಯಾದಗಿರಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ಯಾದಗಿರಿ.**